ಸೌಹಾರ್ದವನ್ನು ಕೆಡಿಸುವುದರ ವಿರುದ್ಧ 10ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಘೋಷಿಸಿದ್ದಾರೆ. ಹಾಗೇನಾದರೂ ಆದರೇ ಅದರಿಂದ ಧಾರ್ಮಿಕ ಕ್ಷೇತ್ರದಲ್ಲಿ ಕೋಲಾಹಲ ಉಂಟಾಗುವುದು ಸಮಾಜದ ಸಾಮರಸ್ಯ ನಷ್ಟವಾಗುವುದು. ಆದ್ದರಿಂದ ಸರ್ಕಾರ ಕೂಡಲೇ ಮಧ್ಯೆ ಪ್ರವೇಶ ಮಾಡಿ ಪೂರ್ವಾಚಾರವನ್ನು ಬೆಂಬಲಿಸಿ ಅನುಚಿತ ಘಟನೆಗೆ ತಡೆಹಾಕಬೇಕೆಂದು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇವೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) : ಅಧ್ಯಕ್ಷರೇ, ಯಾವ ಪದ್ಧತಿಯಲ್ಲಿ ಇದು ನಡೆಯಬೇಕು ಹಾಗೆಯೇ ನಡೆಸುವ ಬಗ್ಗೆ ಸುಬ್ರಹ್ಮಣ್ಯದೇವಸ್ಥಾನದ ಆಡಳಿತ ವರ್ಗಕ್ಕೆ ನಾನು ವಿವರಣೆ ನೀಡಿದ್ದೇನೆ. ಏನೂ ತಾರತಮ್ಯ ಮಾಡುವ ಅವಶ್ಯಕತೆ ಇಲ್ಲ. ವೈಶಾಖ ಶುದ್ಧ 14 ರಂದು ಏನು ನರಸಿಂಹಜಯಂತಿ ಮಾಡುತ್ತೇವೆ, ಅದಕ್ಕೆ ದೇವಸ್ಥಾನ ಕಡೆಯಿಂದ ಯಾವುದೇ ಅಭ್ಯಂತರವಿಲ್ಲ. ಯಾವ ರೀತಿ ವಹಿವಾಟಿದೆ ಅದೇ ಪ್ರಕಾರ ಎಲ್ಲಾ ಖರ್ಚುಗಳನ್ನೂ ಮಠದವರೇ ವಹಿಸಿಕೊಳ್ಳುವ ವ್ಯವಸ್ಥೆ ಇದೆ. ಆ ಮಠದಿಂದ ಎಲ್ಲಾ ಸಾಮಾನು ಕೊಟ್ಟರೆ ಅಲ್ಲಿ ನೈವೇದ್ಯಮೃಷ್ಟಾನ್ನ ಮಾಡಿ ನರಸಿಂಹಸ್ವಾಮಿಯ ಸಾನ್ನಿಧ್ಯದಲ್ಲಿ ಭಿಕ್ಷೆಯ ಸಮಾರೋಪವನ್ನು ವಹಿಸಿಕೊಂಡು ಎರಡು ದೇವರುಗಳನ್ನೂ ಅಡ್ಡಪಲ್ಲಕ್ಕಿ ಕೂರಿಸಿ ನಮ್ಮ ಮೈದಾನದಲ್ಲಿ ಏಳು ಸುತ್ತು ಮೆರವಣಿಗೆ ಮಾಡಲಿಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದಾರೆ ಆಡಳಿತ ವರ್ಗ ಇದರಲ್ಲಿ ಯಾವ ಲೋಪದೋಷ ಮಾಡಿಲ್ಲ. ಪೇಜಾವರ ಸ್ವಾಮಿಗಳು ಉಪವಾಸ ಕೂರುತ್ತಾರೆಂಬ ಸಮಾಚಾರ ನಮ್ಮ ಗಮನಕ್ಕೆ ಬಂದಿಲ್ಲ. ಆ ಮಟ್ಟಕ್ಕೆ ಇದನ್ನು ಒಯ್ಯದಂತೆ ಯಥಾವತ್ತಾಗಿ ಸಮಾರಂಭ ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಸುರೇಶ್ ಕುಮಾರ್ ಲೈವ್‌ಬ್ಯಾಂಡ್.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಸುರೇಶ್ ಕುಮಾರ್ ಲೈವ್‌ಬ್ಯಾಂಡ್ ಎಂದರೆ ಬೇರೆ ಅರ್ಥವಾಗಿಬಿಡುತ್ತದೆ.

MR. SPEAKER : It is neither Suresh Kumar's nor Ramesh Kumar's.

ರಾಜಾಜಿನಗರದ ಲೈವ್ ಬ್ಯಾಂಡ್‌ನಲ್ಲಿ ಕೊಲೆಯಾದ ಪ್ರಸ್ತಾಪ

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆಯಿಂದ ಬೆಂಗಳೂರಿನಲ್ಲಿ ಪೋಲೀಸ್‌ನವರು ಬಹಳ ಚುರುಕಾಗಿಬಿಟ್ಟಿದ್ದಾರೆ. ನಿನ್ನೆ ಬೆಳಿಗ್ಗೆಯಿಂದ ರೈಡ್ ಮಾಡಿ ಸುಮಾರು 23 ಕೇಸ್‌ಗಳನ್ನು ಬುಕ್ ಮಾಡಿದ್ದಾರೆ. ಈ ರೀತಿ ಚಟುವಟಿಕೆ ಮಾಡಲಿಕ್ಕೆ ಒಂದು ಕೊಲೆ ಆಗತ್ಯವಿತ್ತೇ ಎನ್ನುವುದೊಂದು ಪ್ರಶ್ನೆ. ಬೆಂಗಳೂರಿನಲ್ಲಿ ಅನೇಕ ಪಿಡುಗುಗಳಿವೆ. ಅದರಲ್ಲಿ ಈ ಲೈವ್‌ಬ್ಯಾಂಡ್ ಒಂದು. ಹಿಂದೆ ಒಬ್ಬರು ಪೋಲೀಸ್ ಕಮೀಷನರ್‌ರವರು ಬೆಂಗಳೂರನ್ನು vices city ಮಾಡಬೇಕೆಂದು ಹೊರಟಿದ್ದರು. ವಿಡಿಯೊ ಗೇಮ್, ಲೈವ್ ಬ್ಯಾಂಡ್ ಅಂಡ್ ರಿಕ್ರಿಯೇಷನ್ ಕ್ಲಬ್, ಇವತ್ತು ಆ vices city ಗೆ ನಾವು ಕ್ಯಾಪಿಟಲ್ ಮಾಡಿಬಿಟ್ಟಿದ್ದೇವೆ. ಮೊನ್ನೆ ರಾಜಾಜಿನಗರದ ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಆ ಲೈವ್‌ಬ್ಯಾಂಡ್ ಕೇಂದ್ರ ಏನು ಇದೆ, ಅದರಲ್ಲಿ ಸಂಭವಿಸಿದ

ಒಂದು ಘಟನೆಯಲ್ಲಿ ಒಬ್ಬ ವ್ಯಕ್ತಿಯ ಕೊಲೆಯಾಗಿರುವುದನ್ನು ನಾವೆಲ್ಲಾ ಓದಿದ್ದೇವೆ. ಅದಾದನಂತರ ಇಡೀ ರಾಜಾಜಿನಗರದಲ್ಲಿ ನಾಗರಿಕರು, ಜನಸಾಮಾನ್ಯರು ಯಾರಿಗೆ ಬಾರ್ ಎಂದರೆ ಗೊತ್ತಿಲ್ಲ ಯಾರಿಗೆ ಲೈವ್ ಬ್ಯಾಂಡ್ ಗೊತ್ತಿಲ್ಲ, ಅವರು ಇವತ್ತು ವಿಶೇಷವಾಗಿ ಹೆಂಗಸರು ಭಯಭೀತರಾಗಿದ್ದಾರೆ. ನಮಗೆ ಚೆನ್ನಾಗಿ ಗೊತ್ತು, ಈ ಲೈವ್ ಬ್ಯಾಂಡ್‌ಗೆ ಯಾರು ಹೋಗುತ್ತಾರೆ ಎಂಬುದು ಗೊತ್ತು. ಸಮಾಜ ದ್ರೋಹಿಗಳು ಹೋಗುತ್ತಾರೆ. ರೌಡಿಗಳು ಅಲ್ಲಿಗೆ ರೋಲ್‌ಕಾಲ್ ಮಾಡುವುದಕ್ಕೆ ಹೋಗುತ್ತಾರೆ. ಇವತ್ತು ಟೈಮ್ಸ್ ಆಫ್ ಇಂಡಿಯಾದಲ್ಲಿ ಇದರ ಬಗ್ಗೆ ಒಬ್ಬರು ಪೋಲೀಸ್ ಅಧಿಕಾರಿ ಹೇಳಿದ್ದಾರೆ. ``The police said women singers were enticing customers with obscene gestures while performing. Under the cover of stay orders from the courts, bar owners are conducting activities violating the provisions of the licence. It was also found that such bars and restuarants have become ``dens" for criminals to discuss their modus operandi. Lately many petty scuffles initiating here turned into full blown lights creating law and order problems, the police added". ಯಾರನ್ನು ಅಪಹರಣ ಮಾಡುವುದು, ಯಾರನ್ನು ಹಲ್ಲೆ ಮಾಡುವುದು ಇದರ ಬಗ್ಗೆ ಡಿಸ್ಕಷನ್ ಕೇಂದ್ರಗಳು. ಈ ಕೇಂದ್ರಗಳ ಬಗ್ಗೆ ನಾವು ಹಲವಾರು ಸಲ ಈ ಸದನದಲ್ಲಿ ತಮ್ಮ ಗಮನಕ್ಕೆ ತಂದಿದ್ದೇವೆ. ಅಜಿಟೇಷನ್ಸ್ ಮಾಡಿದ್ದೇವೆ. ಪೋಲೀಸ್ ಕಮೀಷನರ್ ಆಫೀಸ್ ಮುಂದೆ ಕೂಡ ನಾವೂ ಧರಣಿ ಮಾಡಿದ್ದೇವೆ. ಸರ್ಕಾರದ್ದು ಈ ಲೈವ್ ಬ್ಯಾಂಡ್ ಸಂಸ್ಕೃತಿ ಬಗ್ಗೆ ಸರ್ಕಾರದ ನಿಲುವೇನು? You should make your stand very clear. ಸರ್ಕಾರ ಇಂಥ ಸಂಗತಿಗಳಿಗೇನಾದರೂ ಪೋಷಕರಾಗುತ್ತೇವೆ ಎಂದು ಹೇಳಿದರೆ ಅದಾದರೂ ಕೂಡ ಈ ಸದನದಲ್ಲಿ ಹೇಳಿಬಿಡಿ. ಕೊಲೆಯಾಗುತ್ತದೆ ಹಲ್ಲೆಯಾಗುತ್ತದೆ, ಕಿಡ್ನಾಪ್ ಆಗುತ್ತದೆ, ಆದರೂ ಕೂಡ ಸರ್ಕಾರ ಸುಮ್ಮನೆ ಇರುತ್ತದೆ. ಅಥವಾ ಇದಾದಮೇಲೆ ಪೋಲೀಸ್ ರೈಡ್ ಮಾಡಿಬಿಟ್ಟು ಬಹಳ ಮೆಕಾನಿಕಲ್ ಆಗಿ ಒಂದಷ್ಟು ಕೇಸುಗಳನ್ನು ನಾವು ಬುಕ್ ಮಾಡುತ್ತಿದ್ದೇವೆ. ನನ್ನದೇ ಪ್ರಶ್ನೆ. Is there a band of live police officers to support these live bands? ನಾನೇನಾದರೂ ಕೇಳಿದರೆ ಸನ್ಮಾನ್ಯ ಸಚಿವರು ಹೇಳುತ್ತಾರೆ ಕೋರ್ಟಿನಿಂದ ಸ್ಟೇ ಆರ್ಡರ್ ಇದೆ ಎನ್ನುತ್ತಾರೆ. ನನಗೆ ಬಹಳ ಖಚಿತವಾಗಿ ಗೊತ್ತು. ಈ ಲೈಸೆನ್ಸ್‌ಗಳನ್ನು ಇವರು ಯಾವ ರೀತಿ ತೆಗೆದುಕೊಳ್ಳುತ್ತಿದ್ದಾರೆಂದರೆ 30 ದಿವಸದೊಳಗೆ ಪೋಲೀಸ್ ಕಮೀಷನರ್ ಲೈಸೆನ್ಸ್‌ನ್ನು ಕೊಡಬೇಕು. 30 ದಿವಸದ ತನಕ ಪೋಲೀಸ್ ಕಮೀಷನರ್ ತಮ್ಮ ಸೀಟಿನಡಿಯಲ್ಲಿ ಸುಮ್ಮನೆ ಇಟ್ಟುಕೊಂಡು ಕುಳಿತಿರುತ್ತಾರೆ. ಡೀಮ್ಡ್ ಲೈಸೆನ್ಸ್ ತರಹ ಇವತ್ತು ತೆಗೆದುಕೊಂಡು ನಡೆಸುತ್ತಿದ್ದಾರೆ. ನೀವು ಇದರ ಬಗ್ಗೆ ಎನ್‌ಕ್ವೈರಿ ಮಾಡಿ. ಎಷ್ಟು ಲೈವ್ ಬ್ಯಾಂಡ್‌ಗಳು ಡೀಮ್ ಲೈಸೆನ್ಸ್‌ನಿಂದ ನಡೆಯುತ್ತಿದೆ, ಆ ಡೀಮ್ಡ್ ಲೈಸೆನ್ಸ್ ಪ್ರೊಡಕ್ಷನ್‌ನಿಂದ ಎಷ್ಟಕ್ಕೆ ಸ್ಟೇ ಆರ್ಡರ್ ಸಿಕ್ಕಿದೆ? ಇದರ ಬಗ್ಗೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ? ಇವತ್ತು ಆ ಬಾರ್‌ಗಳಲ್ಲೂ ಅಷ್ಟೆ. 11 ಗಂಟೆಯಾದ ಮೇಲೆ ಅಲೋ ಮಾಡಬಾರದು. ನಿಮ್ಮ ಪೋಲೀಸ್‌ನವರು ಅಲ್ಲಿ ಓಡಾಡುವುದಿಲ್ಲ. ಏಕೆಂದರೆ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. 11 ಗಂಟೆ,12 ಗಂಟೆ, 1 ಗಂಟೆಯವರೆಗೂ ಅಲ್ಲಿ ಚಟುವಟಿಕೆ ನಡೆಯುತ್ತದೆ ನಾವ್ಯಾರೋ ಮೀಟಿಂಗ್

ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದರೆ ನಮ್ಮ ಬಾಯನ್ನು ತೆಗೆಸಿ ವಾಸನೆಬಿಡಿ ಎನ್ನುತ್ತಾರೆ. ಅದಕ್ಕೋಸ್ಕರ ಈ ಲೈವ್ ಬ್ಯಾಂಡ್ ಬಗ್ಗೆ ರಾತ್ರಿ 11 ಗಂಟೆಯಾದ ಮೇಲೂ ಈ ಚಟುವಟಿಕೆಗಳನ್ನು ನಡೆಸುತ್ತಿರುವುದರ ಬಗ್ಗೆ ಕೊಲೆ, ಹಲ್ಲೆ, ಅಪಹರಣ ಮಾಡುತ್ತಿರುವ ಕೇಂದ್ರಗಳ ಬಗ್ಗೆ ಸರ್ಕಾರದ ನಿಲುವೇನು? ಲೈವ್ ಬಾಂಡನ್ನು ಈ ಕೂಡಲೇ ನಿಲ್ಲಿಸಲಿಕ್ಕೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ. ಇದಕ್ಕೆ ಉತ್ತರವನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಲೈವ್ ಬ್ಯಾಂಡನ್ನು ನಿಲ್ಲಿಸುತ್ತೇವೆ ಎಂದು ಹೇಳಿ ಅದನ್ನು ನಿಲ್ಲಿಸಿದ್ದೇವೆ, ಅದರ ಬಗ್ಗೆ ನಾವು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ. ಇವತ್ತು ಲೈವ್ ಬ್ಯಾಂಡ್ ಎನ್ನುವುದು ನಿಮ್ಮನ್ನೆಲ್ಲಾ ಮೀರಿ ಅವರೇ ಕಾನೂನು ಮತ್ತು ಸುವ್ಯವಸ್ಥೆಯನ್ನು ತಮ್ಮ ಕೈಗೇ ತೆಗೆದುಕೊಂಡು ಎಲ್ಲಾ ಕಡೆ ಹುಚ್ಚೆದ್ದು ಕುಣಿಯುತ್ತಿದ್ದಾರೆ. ಮತ್ತೆ ಈ ಊರಿನಲ್ಲಿ ಮಟ್ಕಾ ಶುರುವಾಗಿದೆ. ಒಂದಂಕಿ ಲಾಟರಿ ಶುರುವಾಗಿದೆ. ಎಲ್ಲಾ ತರಹದ ಅವ್ಯವಹಾರ, ಜೂಜು ಎಲ್ಲಾ ನಡೆಯುತ್ತಿದೆ. ಬೆಂಗಳೂರು ನಗರ ಜೂಜಿನ ನಗರವಾಗಿದೆ. ಮಟ್ಕಾ ನಗರವಾಗಿದೆ, ಲೈವ್‌ಬ್ಯಾಂಡ್ ನಗರವಾಗಿದೆ. ಇಲ್ಲಿ ನಾಗರೀಕರು ಬದುಕುವ ವ್ಯವಸ್ಥೆ ತೀರಾ ಅತ್ಯಂತ ಭಯಾನಕವಾಗಿರುವ ಪರಿಸ್ಥಿತಿ. ಇದು ಬಹಳ ಅಪಾಯಕಾರಿ ಬೆಳವಣಿಗೆ. ಇದು ಕೊಲೆಯಾಗುವ ಮಟ್ಟಕ್ಕೆ ಕೊಲೆಯಾದ ಶವವನ್ನು ರಸ್ತೆಯಲ್ಲಿಟ್ಟುಕೊಂಡು ಈ ಸರ್ಕಾರ ಪೋಲೀಸರ ಬಗ್ಗೆ ಈ ವ್ಯವಸ್ಥೆ ನಡೆದರೆ ಬೆಂಗಳೂರು ನಾಗರೀಕರ ಗತಿಯೇನು? ಬೆಂಗಳೂರಿನ ಪರಿಸ್ಥಿತಿಯೇನು? ಬೆಂಗಳೂರು ನಿಜವಾಗಿಯೂ ಒಂದು ರೀತಿ ಕೆಟ್ಟಿದೆ. ಯಾರು ಬಂದು ಬೆಂಗಳೂರಿಗೆ ಸೇರುತ್ತಾರೆ, ರೌಡಿಗಳು ಬರುತ್ತಿದ್ದಾರೆಯೇ? ದರೋಡೆಕೋರರು ಬರುತ್ತಿದ್ದಾರೆಯೇ? ಯಾರ್ಯಾರು ಬರುತ್ತಾರೆ ಎಂದು ಹೇಳಿ ಯಾರ ಮೇಲೂ ನಿಗಾ ಇಲ್ಲ. ಇವತ್ತು ಬೆಂಗಳೂರಿನ ಜನ ಧೈರ್ಯವಾಗಿ ನಾವು ರಸ್ತೆಯಲ್ಲಿ ಓಡಾಡಬಹುದು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಹೊಯ್ಸಳ ವಾಹನಗಳು ಓಡಾಡುತ್ತಿವೆ. ಅವರ ಬಗ್ಗೆ ನನಗೇನೂ ವಿರೋಧ ಇಲ್ಲ. ನನಗನಿಸುತ್ತದೆ, ಇವತ್ತು ಭಯಭೀತಿಯ ನಗರವಾಗಿ ಬೆಂಗಳೂರು ಪರಿಣಮಿಸುತ್ತಿದೆ. ಜನರಲ್ಲಿ ಭಯಭೀತಿ ಹೋಗಿಸುವ ವ್ಯವಸ್ಥೆ ತಾವು ಮಾಡಲಿಲ್ಲ ಎಂದರೆ ನಿಜವಾಗಿಯೂ ನಿಮಗೆ ನೇರವಾಗಿ ಕೆಟ್ಟಹೆಸರು ಬರುತ್ತದೆ. ಈ ಬಗ್ಗೆ ಯಾರೋ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಸಸ್ಪೆಂಡ್ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ನೇರವಾದ ಹೊಣೆಯನ್ನು ಯಾರು ಮುಖ್ಯರು ಇರುತ್ತಾರೆ, ಅವರು ನೇತೃತ್ವವನ್ನು ವಹಿಸಿಕೊಳ್ಳಬೇಕು. ಅದನ್ನು ಬಿಟ್ಟು ಇಬ್ಬರು ಪೇದೆಗಳನ್ನು ನೀವು ಮನೆಗೆ ಕಳುಹಿಸಿದರೆ ಏನೂ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ದಯವಿಟ್ಟು ಒಂದು ಹೇಳಿಕೆಯನ್ನು ಇದರ ಬಗ್ಗೆ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ಸದಸ್ಯರಾದ ಸುರೇಶ್ ಕುಮಾರ್‌ರವರು ಈ ಲೈವ್ ಬ್ಯಾಂಡ್ ಘಟನೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಇದರಲ್ಲಿ ಸರ್ಕಾರದ ನಿಲುವೇನು ಎಂದು ಕೇಳಿದ್ದಾರೆ. ಒಂದು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

The stand of the Government is very clear. ನಾವು ಬೆಂಗಳೂರು ನಗರದಲ್ಲಿ ಲೈವ್ ಬ್ಯಾಂಡ್‌ಗೆ ಪರ್ಮಿಷನನ್ನು ಕೊಡುವುದಿಲ್ಲ. ನಮ್ಮ ಸರ್ಕಾರ ಬಂದಮೇಲೆ ಬೆಂಗಳೂರು ನಗರದಲ್ಲಿ ಒಂದು ಲೈವ್‌ಬ್ಯಾಂಡ್ ಕೂಡ ಇರಲಿಲ್ಲ. We had closed all the live bands. ಆಮೇಲೆ ಏನಾಯಿತು ಎಂದರೆ ಕೆಲವರು ಕೋರ್ಟಿಗೆ ಹೋಗಿ ಸ್ಟೇಗಳನ್ನು ತೆಗೆದುಕೊಂಡು ಬಂದರು. ಈಗ ಸರ್ಕಾರದಿಂದ, ಪೋಲೀಸ್ ಕಡೆಯಿಂದ ಎನ್‌ಫೋರ್ಸ್‌ಮೆಂಟ್ ಮಾಡಬೇಕಾದರೆ ಒಂದು ಜಡ್ಜ್‌ಮೆಂಟ್ ದಿ 1.3.98ರಲ್ಲಿ ಈ ರೀತಿ ಬರುತ್ತದೆ. ಅದು ಏನೆಂದರೆ: Aggrieved by the action taken by the police, the Live band operators again approached the High Court which made certain observations and disposed of the Writ petition in its judgement dated 11.8.1998. Some of the observations of the High Court have taken away the very basis of the enforcement. ಇದು ಕೋರ್ಟಿನಿಂದ ಆದೇಶವಾಗಿ ಅಲ್ಲಿ ಪೋಲೀಸರು ಹೋಗಿ ಇಂಟರ್‌ಫಿಯರ್ ಮಾಡಬಾರದು. ಅಲ್ಲಿ ವಿಮೆನ್ ಒಂದು ಕಡೆ ಇರುತ್ತಾರೆ. ಲಿಕ್ಕರ್ ಕೂಡ ಒಂದು ಸಪ್ಲೈಯಾಗುತ್ತಿರುತ್ತದೆ. ಒಂದು ಕಡೆ ಹಾಡು ಹೇಳುವವರು ಇರುತ್ತಾರೆ. ಒಂದು ಕಡೆ ಅವರು ಲೈವ್ ಬ್ಯಾಂಡ್ ಮಾಡಬಹುದು ಎಂದು ಹೇಳಿದ್ದಾರೆ. ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ ಒಂದು ಮಾತನ್ನು ನಾನು ಒಪ್ಪುತ್ತೇನೆ. ಸಿಟಿ ಆಫೀಸಿನಿಂದ ಯಾವ ರೀತಿ ಅವರಿಗೆ ಪರ್ಮಿಷನನ್ನು ಕೊಟ್ಟಿದ್ದರು? 30 ದಿವಸಗಳ ಕಾಲ ಅರ್ಜಿಯನ್ನು ಇಟ್ಟುಕೊಂಡು ಕೊನೆಯಲ್ಲಿ ಏಕೆ ಕೊಟ್ಟಿದ್ದರು?

ಅಧ್ಯಕ್ಷರು : ಯಾವ ಜಡ್ಜ್ ಮೆಂಟ್? ಮ್ಯಾಜಿಸ್ಟ್ರೇಟ್ ಕೋರ್ಟ್? ಹೈಕೋರ್ಟ್? ಯಾವ ಕೋರ್ಟು ಎಂದು ಎಲ್ಲರಿಗೂ ಗೊತ್ತಾಗಲಿ.

ಶ್ರೀ ಆರ್. ರೋಷನ್ ಬೇಗ್ : ಹೈಕೋರ್ಟು ಜಡ್ಜ್‌ಮೆಂಟ್. ನಾವು ಪೋಲೀಸ್ ವತಿಯಿಂದ, ಸರ್ಕಾರದ ವತಿಯಿಂದ ಒಂದು ಸಿ.ಓ.ಡಿ ಎನ್‌ಕ್ವೈರಿಗೆ ಆರ್ಡರನ್ನು ಮಾಡುತ್ತೇವೆ. ಎಷ್ಟು ಅರ್ಜಿಗಳನ್ನು ಪಡೆದುಕೊಂಡರು? ಏಕೆ ಇವರು ಸರಿಯಾದ ವೇಳೆಯಲ್ಲಿ ರಿಜೆಕ್ಟ್ ಮಾಡಲಿಲ್ಲ, ಇದರಲ್ಲಿ ಕೆಲವು ಲೂಫ್‌ಹೋಲ್ಸ್ ಇದೆ. ಏಕೆ ಇವರು ಕೆಲವರಿಗೆ ಪರ್ಮಿಷನ್ನು ಕೊಟ್ಟಿದ್ದಾರೆ ಎಂದು ಎಲ್ಲಾ ನೋಡುತ್ತೇವೆ. The policy of the Government is very clear. ನಾವು ಬೆಂಗಳೂರು ನಗರದಲ್ಲಿ ಲೈವ್ ಬ್ಯಾಂಡ್ ಮಾಡಲಿಕ್ಕೆ ಬಿಡುವುದಿಲ್ಲ. ಕೆಲವು ಲೂಪ್‌ಹೋಲ್ಸ್‌ಗಳು ಇವೆ. ಅಡ್ವೋಕೇಟ್ ಜನರಲ್‌ರವರಿಗೆ ಕೂಡ ನಾವು ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಯಾರ್ಯಾರು ಸ್ಟೇ ತೆಗೆದುಕೊಂಡು ಬಂದಿದ್ದರೋ ಅದನ್ನೆಲ್ಲಾ ಇಮ್ಮೀಡಿಯೇಟ್ ಆಗಿ ಸ್ಟೇ ವೆಕೇಟ್ ಮಾಡಿಸಬೇಕೆಂದು ಹೇಳಿದ್ದೇವೆ. ಸ್ಟೇಯನ್ನು ಯಾರು ತೆಗೆದುಕೊಂಡಿದ್ದಾರಲ್ಲಾ, ಆ ಸ್ಟೇಯನ್ನು ವೆಕೇಟ್ ಮಾಡಿಸಬೇಕೆಂದು ಹೇಳಿ ನಾವು ಅಡ್ವೋಕೇಟ್ ಜನರಲ್‌ರವರಿಗೆ ರಿಕ್ವೆಸ್ಟ್ ಮಾಡಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಫೈನಲ್ ಆರ್ಡರ್ ಆಗಿದೆ. ಸ್ಟೇ ವೆಕೇಟ್ ಪ್ರಶ್ನೆಯೇ ಬರುವುದಿಲ್ಲ. ಅದರ ಮೇಲೆ ಅಪೀಲು ಕೂಡ ಹೋಗಿಲ್ಲ.

ಶ್ರೀ ಆರ್. ರೋಷನ್ ಬೇಗ್ : ಲೈವ್ ಬ್ಯಾಂಡ್‌ಗೆ ನಾವು ಸರ್ಕಾರದ ವತಿಯಿಂದ ಪರ್ಮಿಷನ್

ಕೊಡುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು, ಬೆಂಗಳೂರು ನಗರದಲ್ಲಿ ಈ ರೀತಿ ಘಟನೆಗಳೆಲ್ಲಾ ನಡೆಯುತ್ತಿದೆ ಎಂದು ಹೇಳಿದರು. 15-16ನೇ ತಾರೀಖು ಒಂದು ಮೀಟಿಂಗನ್ನು ಇಟ್ಟುಕೊಂಡಿದ್ದೆವು. ಅಸೆಂಬ್ಲಿ ಇದೆ ಎಂದು ಹೇಳಿ ಮೀಟಿಂಗನ್ನು ಪೋಸ್ಟ್‌ಪೋನ್ ಮಾಡಿ ತಿಂಗಳ ಕೊನೆಯಲ್ಲಿ ಬಾಂಬೆ ಸಿಟಿ ಪೋಲೀಸ್ ಕಮೀಷನರ್, ಮಹಾರಾಷ್ಟ್ರ ಡಿಐಜಿ ಆಫ್ ಪೋಲೀಸ್, ಮಹಾರಾಷ್ಟ್ರ ಡಿಐಜಿ ಇಂಟೆಲಿಜೆನ್ಸ್ ತ್ರಿವೆಂಡ್ರಮ್ ಪೋಲೀಸ್ ಕಮೀಷನರ್, ಚೆನ್ನೈ ಪೋಲೀಸ್ ಕಮೀಷನರ್, ಗೋವಾ ಡಿಐಜಿ ಇಂಟೆಲಿಜೆನ್ಸ್, ಇವರನ್ನೆಲ್ಲಾ ಸೇರಿಸಿ ಒಂದು ಸಭೆಯನ್ನು ನಡೆಸುತ್ತಿದ್ದೇವೆ. The flow of criminals from these states to Bangalore. ಅದನ್ನು ನಿಲ್ಲಿಸಬೇಕು. ಏನೇನು ಚಟುವಟಿಕೆಗಳು ನಡೆಯುತ್ತಿವೆ, ಅದನ್ನೆಲ್ಲಾ ಸ್ಪಡಿ ಮಾಡುವುದಕ್ಕೆ ಒಂದು ಸಭೆಯನ್ನು ನಡೆಸುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಹೈಕೋರ್ಟ್ ಆರ್ಡರ್ ಬಗ್ಗೆ ಹೇಳಿದಿರಿ. ಸ್ಟೇ ನೆರವಿನಲ್ಲಿ ನಡೆಯುತ್ತಿರುವ ಲೈವ್ ಬ್ಯಾಂಡ್ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಸ್ಟೇ ಬಗ್ಗೆ ನೀವು ಅಪೀಲು ಹೋಗುವುದಿಲ್ಲ. ನಮ್ಮ ಅಡ್ವೋಕೇಟ್ ಜನರಲ್ ಇದ್ದಾರೆ, ನಮ್ಮ ಲಾ ಸೆಕ್ರೆಟರಿ ಇದ್ದಾರೆ, ಕಾನೂನು ಇಲಾಖೆ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸ್ಟೇ ಅಲ್ಲ, ಫೈನಲ್ ಆರ್ಡರ್ ಆಗಿದೆ. ಹೈಕೋರ್ಟಿನಲ್ಲಿ ಫೈನಲ್ ಆರ್ಡರ್ ಆಗಿದೆ. ಅದರ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಬೇಕಷ್ಟೆ. ಸ್ಟೇ ಅಲ್ಲ ಅದು. ಫೈನಲ್ ಆರ್ಡರ್ ಆಗಿದೆ.

11.40 ಎಎಂ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆ ಬಹಳ ಗಂಭೀರವಾದಂತಹ ಪ್ರಶ್ನೆ. ಏಕೆಂದು ಹೇಳಿದರೆ ಬೆಂಗಳೂರು ನಗರ ಮತ್ತು ಇನ್ನಿತರ ನಗರಗಳಲ್ಲಿ ತಮಗೆ ನೆನಪು ಇರಬಹುದು ನಮ್ಮ ಸರ್ಕಾರ ಇರುವಾಗ ಕೂಡ ನಾವು ಲೈವ್ ಬ್ಯಾಂಡ್, ಕ್ಯಾಬರೆ, ಗ್ಯಾಂಬ್ಲಿಂಗ್, ವಿಡಿಯೋ ಗೇಮ್ಸ್, ಒಂದಂಕಿ ಲಾಟರಿ ಇವನ್ನೆಲ್ಲಾ ಕಂಟ್ರೋಲ್‌ನಲ್ಲಿ ಇಡುತ್ತಿದ್ದೆವು. ಆಗಲೂ ಕೂಡ ಹೈಕೋರ್ಟ್‌ಗಳು ಇದ್ದವು, ಕೋರ್ಟುಗಳೂ ಇದ್ದವು. ಆದರೂ ಕೂಡ ಯಾವುದೇ ಸಮಯದಲ್ಲಿ ನಾವು ಅವುಗಳನ್ನು ನಡೆಸಲಿಕ್ಕೆ ಬಿಡಲಿಲ್ಲ. ಕಟ್ಟುನಿಟ್ಟಾಗಿ ಮಾಡಿದ್ದೆವು. ಅದನ್ನು ಹೇಗೆ ಮಾಡುತ್ತೀರೋ ನನಗೆ ಗೊತ್ತಿಲ್ಲ. ಅದು ಹೇಗೆ ಮಾಡಬೇಕೆಂದು ಪೋಲೀಸ್ ಅಧಿಕಾರಿಗಳಿಗೆ ಗೊತ್ತಿದೆ. ನಾನು ತಮಗೆ ಹೇಳುವುದೇನೆಂದರೆ ಪೋಲೀಸ್ ಅಧಿಕಾರಿಗಳಿಗೆ ಗೊತ್ತಿದೆ. ಲೈವ್ ಬ್ಯಾಂಡ್‌ಗಳು ಎಲ್ಲೂ ನಡೆಯಬಾರದು. We should make it clear ಈಗ ಹೈಕೋರ್ಟ್ ಬಂದಿದೆ, ಇಲ್ಲೊಂದು ಬಂದಿದೆ, ಅಲ್ಲಿ ಸ್ಟೇ ಬಂದಿದೆ ಎಂದು ಹೇಳುವುದೆಲ್ಲಾ ನೆಪಗಳು ಮಾತ್ರ. ನಾವೂ ಆಡಳಿತವನ್ನು ಮಾಡಿದ್ದೇವೆ. ಹಾಗಾಗಿ ಎಲ್ಲೂ ಲೈವ್ ಬ್ಯಾಂಡ್ ಇರಲಿಲ್ಲ. ನಾವು ಟೈಮ ಕೂಡ ಫಿಕ್ಸ್ ಮಾಡಿದ್ದೆವು. ಕಾಲೇಜಿನಿಂದ ಹೊರಗೆ ಬರುವಂತಹ ಟೈಮ್‌ನಲ್ಲಿ ಎಲ್ಲೂ ಕೂಡ ಯಾವುದೇ ಬಾರ್ ಓಪನ್ ಇರಬಾರದು ಎಂದು ಹೇಳಿ ನಾವು ನಿರ್ಬಂಧ

ಹಾಕಿದ್ದೆವು. ರಾತ್ರಿ ಕೂಡ ನನಗೆ ನೆನಪು ಇರುವ ಹಾಗೆ 9 ಗಂಟೆಯ ನಂತರ ಎಲ್ಲೂ ಲಿಕ್ಕರ್ ಸರ್ವ್ ಮಾಡಬಾರದು ಎಂದು ಹೇಳಿ ಸ್ಪಿಕ್ವಾಗಿ ಸೂಚನೆ ಕೊಟ್ಟಿದ್ದೆವು. ಅದನ್ನು ನಾವು ಪಾಲಿಸಿದ್ದೇವೆ. ಇದು ಸಾಧ್ಯತೆ ಇದೆ. ಸಾಧ್ಯವಾಗದಂತಹ ವಿಚಾರ ಅಲ್ಲ. ತಾವು ದಯಮಾಡಿ ಈ ಬಗ್ಗೆ ರಿವ್ಯೂ ಮಾಡಬೇಕು. ಏಕೆಂದರೆ ಅನೇಕ ಕಡೆ ನಾವು ಕ್ಯಾಬರೆ ನೋಡುತ್ತಿದ್ದೇವೆ. ನಾವು ನೋಡುವುದಿಲ್ಲ. ಕ್ಯಾಬರೆ ಸಾರಾಸಗಟಾಗಿ ಕರ್ನಾಟಕದ ಬೇರೆ ಬೇರೆ ಕಡೆ ನಡೆಸುತ್ತಿದ್ದಾರೆ. ಗ್ಯಾಂಬ್ಲಿಂಗ್, ಡನ್‌ಗಳೂ ನಡೆಯುತ್ತಿವೆ.

ಅಧ್ಯಕ್ಷರು : ಎಲ್ಲಾ ಕಡೆ ಜನರು ಕ್ಯಾಬರೆ ನೋಡುತ್ತಾರೆ. ನಮ್ಮ ಕ್ಯಾಬರೆಯನ್ನೂ ಜನ ನೋಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಲಿ : ಇಲ್ಲೇನು ಕ್ಯಾಬರೆ ನಡೆಯುತ್ತದೆ ಎಂದು ಹೇಳಿ ನಮ್ಮ ಕ್ಯಾಬರೆಯನ್ನೂ ನೋಡುತ್ತಾರೆ. ತಾವು ದಯಮಾಡಿ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಈ ಚಟುವಟಿಕೆಗಳಾದ ಗ್ಯಾಂಬ್ಲಿಂಗ್, ವಿಡಿಯೋ ಗೇಮ್ಸ್, ಲೈವ್ ಬ್ಯಾಂಡ್, ಕ್ಯಾಬರೆಗಳಿಗೂ ಗೂಂಡಾಯಿಸಂಗೂ ಬಹಳ ಪರಸ್ಪರ ಸಂಬಂಧ ಇದೆ. ಇದನ್ನು ನೀವು ಸರಿಯಾಗಿ ನಿಯಂತ್ರಣ ಮಾಡದೇ ಇದ್ದರೆ ಈ ಗೂಂಡಾಗಳು ಬಾಂಬೆಯಿಂದ ಬರುತ್ತಾರೆ, ಮತ್ತೊಂದು ಕಡೆಯಿಂದ ಬರುತ್ತಾರೆ. ಇಲ್ಲಿಯೇ ಹುಟ್ಟಿಕೊಳ್ಳುತ್ತಾರೆ. ನೀವು ನೋಡಿರಬಹುದು, ಆ ಸಂದರ್ಭದಲ್ಲಿ ಗೂಂಡಾ ಅಂಡರ್‌ಗ್ರೌಂಡ್ ಆಕ್ಟಿವಿಟೀಸ್ ಎಲಿಮಿನೇಟ್ ಮಾಡಿದಾಗ ಅನೇಕರು ನಮಗೆ ಜೈಲೇ ಸಾಕು ಎಂದು ಹೇಳಿ ಜೈಲಿನ ಒಳಗೆ ಬಂದು they opted for jail.

Mr. SPEAKER : This is where we can consider. ಆ ಓರಾ ಕಮೀಷನ್ ರಿಪೋರ್ಟನ್ನು ಇವರು ಸ್ವಲ್ಪ ಅಸ್ತಿತ್ವಕ್ಕೆ ತಂದರೆ ಒಳ್ಳೆಯದು.

ಶ್ರೀ ವೀರಪ್ಪ ಮೊಯಿಲಿ : ದಯಮಾಡಿ ಇದರ ಬಗ್ಗೆ ಬಹಳ ಗಂಭೀರವಾದಂತಹ ಆಲೋಚನೆ ಮಾಡಬೇಕು. ಬಹುಶಃ ಅಲ್ಲಿ ಸ್ಪೇ ಇತ್ತು ಇಲ್ಲಿ ಸ್ಪೇ ಇತ್ತು ಎಂದು ಹೇಳುವುದು ಮುಖ್ಯವಲ್ಲ. ಸ್ಪೇ ಯಾವುದೇ ಇರಬಹುದು, ಯಾವುದೇ ಸ್ಪೇ ಕೂಡ ನಾವು ಸರಿಯಾಗಿ ವಾದ ಮಾಡಿದರೆ ಯಾವುದೇ ಹೈಕೋರ್ಟ ಜಡ್ಜ್ ಕೂಡ ಇದಕ್ಕೆ ಪ್ರೋತ್ಸಾಹವನ್ನು ಖಂಡಿತವಾಗಿ ಕೊಡುವುದಿಲ್ಲ. ಆದರೆ ನಾವೇ ಲೂಪ್‌ಹೋಲ್ಸ್ ಕ್ರಿಯೇಟ್ ಮಾಡಿ ಅವರಿಗೆ ಕೊಟ್ಟರೆ ಕೋರ್ಟಿನಲ್ಲಿ mechanically they have to pass an order. ನಾನು ಕೋರ್ಟುಗಳನ್ನು ದೂರುವುದಿಲ್ಲ. ಏಕೆಂದರೆ ಈಗಲೂ ಕೋರ್ಟ್ ಇದೆ, ಆಗಲೂ ಕೋರ್ಟ್ ಇತ್ತು. ಈಗ ಏಕೆ ನಡೆಯುತ್ತಿದೆ? ಆಗ ಏಕೆ ನಡೆಯಲಿಲ್ಲ? ಬಹುಶಃ ಇದಕ್ಕೆ ಪೋಲೀಸ್ ಅಧಿಕಾರಿಗಳೇ ಕಾರಣ. ತಾವು ದಯಮಾಡಿ ಇದನ್ನು ಸಂಪೂರ್ಣವಾಗಿ ಒಂದು ಐರನ್ ಹ್ಯಾಂಡ್‌ನಿಂದ ನಿಗ್ರಹ ಮಾಡದೇ ಇದ್ದರೆ ಇದಕ್ಕೆ ನೆಪಗಳನ್ನು ಅವರೂ ಕೊಡುತ್ತಾರೆ, ನಾವೂ ಕೊಡುತ್ತೇವೆ. ತಪ್ಪಿಸತಕ್ಕಂಥ ವ್ಯವಹಾರವಲ್ಲ ಇದು. ಆದ್ದರಿಂದ ಸಂಪೂರ್ಣವಾಗಿ ನಿಲ್ಲಿಸತಕ್ಕ ಪ್ರಯತ್ನ ಮಾಡದೇ ಇದ್ದರೆ ರೌಡಿಗಳನ್ನು, ಬೆಂಗಳೂರಿನಲ್ಲಿ ಹಾಗೂ ಇನ್ನಿತರ ಕೆಲವು ಕಡೆ ನಿಗ್ರಹ ಮಾಡಲಿಕ್ಕೆ ನಿಲ್ಲಿಸಲಿಕ್ಕೆ ನಿಮಗೆ ಆಗುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಸಭಾಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ಈ ಕೋರ್ಟ್‌ನ ಒಂದು ಎಕ್ಯೂಸ್ ತೆಗೆದುಕೊಂಡು ಸ್ಟೇ ತೆಗೆದುಕೊಂಡು ನಡೆಸುತ್ತಿದ್ದಾರೆ ಇದಕ್ಕೆ ಪರ್ಮಿಷನ್ ಹೇಗೆ ಕೊಟ್ಟರು ಎಂದು ತಿಳಿದುಕೊಳ್ಳುವ ಬಗ್ಗೆ ಒಂದು ಸಿಓಡಿ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಸೋಮವಾರ ಬೆಳಿಗ್ಗೆ 9.30ಕ್ಕೆ ನಾನು ಮಾನ್ಯ ಸುರೇಶ್ ಕುಮಾರ್ ಅವರು ಹಾಗೂ ಸಿಟಿ ಎಂಎಲ್‌ಎ ನಂಜೇಗೌಡರು, ಮಾನ್ಯ ನಾಗರಾಜ್ ಅವರನ್ನೂ ಸೇರಿಸಿಕೊಂಡು ಒಂದು ಮೀಟಿಂಗ್ ಕರೆದಿದ್ದೇನೆ. ಕೋರ್ಟ್ ಬಗ್ಗೆ ವಿಚಾರ ಇದೆ, ಮಾನ್ಯ ಪ್ರಮೀಳಾ ಅವರೂ ಬರಲಿ. ಯಾವದೋ ಸ್ಟೇ ಇರಲಿ ಕುಳಿತು ನಾವು ಚರ್ಚೆ ಮಾಡೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೈಸೂರು ರೋಡಿನಲ್ಲಿ ಒಂದು ಕ್ಲಬ್ ಇದೆ. ರಾತ್ರಿ ಎರಡು ಗಂಟೆಗೆ ಪೋಲೀಸ್ ಆಫೀಸರ್ಸ್ ವ್ಯಾನ್‌ಗಳು ಅಲ್ಲಿರುತ್ತದೆ. ನಾನು ಏಕೆ ಹೇಳುತ್ತಿದ್ದೇನೆಂದರೆ.

ಶ್ರೀ ಆರ್. ರೋಷನ್ ಬೇಗ್ : ನೀವು ಆ ವಿಚಾರ ಸೋಮವಾರ ಬೆಳಿಗ್ಗೆ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ರಾತ್ರಿ ಹೊತ್ತು ಹೋಗಿ ನೋಡಬೇಕು. ಕಾಲೇಜ್ ಹಾಸ್ಟೆಲ್ ಹುಡುಗಿಯರನ್ನು ವ್ಯಾನ್‌ನಲ್ಲಿ ಕರೆದುಕೊಂಡು ಹೋಗುತ್ತಾರೆ. ನಾನು ಬಹಳ ದುಃಖದಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ಇದಕ್ಕೆ ನೀವು ಕಂಟ್ರೋಲ್ ಮಾಡದೇ ಇದ್ದರೆ ಕಷ್ಟವಾಗುತ್ತದೆ. ಪೋಲೀಸ್ ಆಫೀಸರ್ಸ್ ಜೊತೆ ಯಾರ್ಯಾರು ಶಾಮೀಲಾಗಿದ್ದಾರೆ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳದೇ ಇದ್ದರೆ ಕಷ್ಟ ಆಗುತ್ತದೆ. ಕೆಂಪಯ್ಯನವರು ಬೆಂಗಳೂರಿನಲ್ಲಿ ಇದ್ದರು. ಬಹಳ ಚೆನ್ನಾಗಿ ಕೆಲಸ ಮಾಡಿದ್ದರು. ಮಾನ್ಯ ಕೋದಂಡರಾಮಯ್ಯನವರೂ ಚೆನ್ನಾಗಿ ಕೆಲಸ ಮಾಡಿದ್ದರು. ಇದನ್ನೆಲ್ಲಾ ಬಹಳ ಚೆನ್ನಾಗಿ ಕಂಟ್ರೋಲ್ ಮಾಡಿದ್ದರು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಆದ್ದರಿಂದ ಸರಿಯಾಗಿ ಬಂದೋಬಸ್ತ್ ತರುವುದಕ್ಕೆ ತಾವು ಎಲ್ಲಾ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ಸೋಮವಾರ ಎಲ್ಲಾ ವಿಷಯ ಪ್ರಸ್ತಾಪ ಮಾಡಿ. ಮಾನ್ಯ ಶ್ರೀರಾಮರೆಡ್ಡಿಯವರು ಹೂಳೆತ್ತುವ ವಿಚಾರ ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ನನಗೆ ಅನ್ನಿಸುವುದು ಏನೆಂದರೆ ಸಮಗ್ರವಾಗಿ ಚರ್ಚೆ ಆಗಬೇಕು. ಏನಾಗಿದೆ ಎಂದರೆ ಬೆಂಗಳೂರಿನಲ್ಲಿ ಭಯಭೀತಿ ಹುಟ್ಟಿ ಬಿಟ್ಟಿದೆ. ನಾವು ಪಬ್ಲಿಕ್ ಆಗಿ ನೋಡುತ್ತಿದ್ದೇವೆ. ಬಾಡಿಗೆ ಕೊಲೆಗಾರರು, ಕರ್ನಾಟಕಕ್ಕ ಬರುತ್ತಿದ್ದಾರೆ. ಬಾಡಿಗೆಯ ಕೊಲೆಗಾರರು ಕರ್ನಾಟಕಕ್ಕೆ ಬರುತ್ತಿದ್ದಾರೆ ಎಂದು ಪತ್ರಿಕೆಯಲ್ಲಿ ವಿಷಯಗಳು ಬರುತ್ತಿವೆ. ಅವರ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇಷ್ಟೆಲ್ಲಾ ಸಮಸ್ಯೆಗಳು ಬೆಂಗಳೂರಲ್ಲಿ ಇರಬೇಕಾಗಿದ್ದರೆ ನೀವು ಚಾಮರಾಜನಗರಕ್ಕೆ ಏಕೆ ಹೋಗುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ : ಬರೇ ಚಾಮರಾಜನಗರಕ್ಕೆ ಸಂಬಂಧಪಟ್ಟಿದ್ದು ಅಲ್ಲ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು. ವಾಟಾಳ್ ನಾಗರಾಜ್ ಅವರು ಇಡೀ ರಾಜ್ಯಕ್ಕೆ ಸಂಬಂಧಪಟ್ಟವರು.

ಆದ್ದರಿಂದ ಈ ಪೋಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಅತ್ಯಂತ ನೋವಾಗಿದೆ. ಬೆಂಗಳೂರಿನ ಜನರಿಗೆ ಆಗಿರತಕ್ಕ ನೋವು, ಬೆಂಗಳೂರಿನ ಜನ ಓಡಾಡುವುದಕ್ಕೆ ಆಗುತ್ತಿಲ್ಲ. ಭಯ ಭೀತಿಯಿಂದ ಇದ್ದಾರೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಕಾಗೋಡು ತಿಮ್ಮಪ್ಪ : ಚರ್ಚೆ ಆಗಬೇಕು ಎಂದು ಹೇಳುತ್ತಿದ್ದಾರೆ. ಚರ್ಚೆ ಆಗುವಂತಹ ಸಂದರ್ಭದಲ್ಲಿ ಎದ್ದು ಹೊರಗೆ ಹೋಗುತ್ತಿದ್ದಾರೆ. ಈಗ ನೀವು ಚರ್ಚೆ ಮಾಡಿದ್ದನ್ನು ನಾವು ಕೇಳಿದ್ದೇವೆ, ನಾವು ಚರ್ಚೆ ಮಾಡುವುದನ್ನು ನೀವು ಕೇಳಬೇಕಲ್ಲಾ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರು ಹೂಳು ಎತ್ತಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಮಗೆ ಗೊತ್ತಿದೆ. ಇಷ್ಟು ಲಘುವಾಗಿ ಮಾತನಾಡತಕ್ಕದ್ದು ಅಲ್ಲ. ಅನೇಕ ಸಾರಿ ಖಾಸಗಿಯಾಗಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಬೆಂಗಳೂರು ಏನಾಗಿದೆ, ಏನು ಪರಿಸ್ಥಿತಿ ಆಗಿದೆ ಎಂದು ನಾವು ಅನೇಕ ಸಾರಿ ಭೇಟಿ ಮಾಡಿ ಮಾತನಾಡಿದ್ದೇವೆ. ಇವತ್ತು ಬೆಂಗಳೂರಿನ ಜನ ನಿಜವಾಗಿಯೂ ಭಯ ಭೀತರಾಗಿದ್ದಾರೆ.

ಅಧ್ಯಕ್ಷರು : ವಾಪಸ್ ಹೋದವರನ್ನು ಕರೆದುಕೊಂಡು ಬಂದು ನನಗೆ ತೊಂದರೆ ಮಾಡಿದಿರಿ.

ಶ್ರೀ ಕಾಗೋಡು ತಿಮ್ಮಪ್ಪ : ವಾಪಸ್ ಹೋಗಿದ್ದಕ್ಕಾದರೂ ಬಂದು ಏನಾದರೂ ಹೇಳಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಾನು ಹಿರಿಯ ಸದಸ್ಯರು ಎಂದು ಬಹಳ ಗೌರವ ಕೊಡುತ್ತೇನೆ. ಅವರು ಈ ತೀರ್ಮಾನಕ್ಕೆ ಬರುವುದಾದರೆ ಬಹಳ ಕಷ್ಟ.

ಶ್ರೀ ಕಾಗೋಡು ತಿಮ್ಮಪ್ಪ : ನಾನೂ ಗೌರವ ಕೊಟ್ಟು ಹೇಳುತ್ತಿದ್ದೇನೆ. ನಿಮಗೆ ಸಪೋರ್ಟ್ ಮಾಡುತ್ತಿದ್ದೇನೆ. ನಾವು ಹೇಳುವುದನ್ನು ನೀವು ಕೇಳಬೇಕಲ್ಲಾ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿರತಕ್ಕಂಥ ಮಾತಿನಲ್ಲಿ ಸತ್ಯ ಇದೆ. ಬೆಂಗಳೂರು ನಗರದಲ್ಲಿ ಪೋಲೀಸ್ ನವರದ್ದೇ ಒಂದು ವೆಸ್ಟೆಡ್ ಇಂಟರೆಸ್ಟ್ ಕ್ರಿಯೇಟ್ ಆಗಿದೆ. ಏನೆಂದರೆ ಕೆಂಗೇರಿ ಸ್ಟೇಷನ್‌ನಿಂದ ಕಬ್ಬನ್ ಪಾರ್ಕ್, ಕಬ್ಬನ್ ಪಾರ್ಕಿನಿಂದ ಬಿನ್ನಿ ಪೇಟೆ, ಬಿನ್ನಿಪೇಟೆಯಿಂದ ಕಬ್ಬನ್ ಪಾರ್ಕ್. ಕಳೆದ 20 ವರ್ಷಗಳಿಂದ ಕಾನ್‌ಸ್ಟೇಬಲ್‌ನಿಂದ ಹಿಡಿದು ಸರ್ಕಲ್ ಇನ್ಸ್‌ಪೆಕ್ಟರ್‌ವರೆಗೆ ಇವರು ಬೆಂಗಳೂರು ನಗರ ಬಿಟ್ಟು ಹೊರಗೆ ಹೋಗಿಯೇ ಇಲ್ಲ. ಅದು ರೋಷನ್ ಬೇಗ್ ಅವರು ಬರಲಿ, ಬೇರೆಯವರು ಬರಲಿ. ಹಿಂದಿನ ಮುಖ್ಯಮಂತ್ರಿಗಳು ಇದ್ದರು, ಹೋಮ್ ಮಿನಿಸ್ಟರ್ ಪಕ್ಕದಲ್ಲಿಯೇ ಇರುತ್ತಾರೆ, ಒಬ್ಬ ಸಬ್ ಇನ್ಸ್‌ಪೆಕ್ಟರ್ ಕಂಡ ಕೂಡಲೇ ಹಲೋ ಎಂದು ಹೇಳುತ್ತಾರೆ. ಯಾರೋ ಒಬ್ಬರು ನಿಮ್ಮಂಥವರು ಸುಮ್ಮನೆ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಆನ್ನಿಸುತ್ತದೆ ನಾವು ಭದ್ರತೆಯನ್ನು ಪ್ರಾಮಾಣಿಕವಾಗಿ ಚಿಂತನೆ ಮಾಡಲಿಲ್ಲ - ಎಂದು ಹೇಳಿದರೆ ಇದರಲ್ಲಿ ರಾಜಕೀಯ ಮಾಡುವುದು ಬೇಡ. ನಾವೇನೂ

ರಾಜಕೀಯ ಮಾಡುತ್ತಿಲ್ಲ. ಬೆಂಗಳೂರು ಸಿಟಿ ನಿಜವಾಗಿಯೂ ಬೆಂಕಿ ಬೀಳುತ್ತಿದೆ, ನನಗೆ ಅನಿಸುತ್ತಿದೆ, ಭಯ ಭೀತಿ ಬರುತ್ತಿದೆ. ಆ ದೃಷ್ಟಿಯಿಂದ ನೀವು ವಿಫಲವಾಗಿದ್ದೀರಿ ಎಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಕಾಗೋಡು ತಿಮ್ಮಪ್ಪ : ಸ್ವಲ್ಪ ನಿಲ್ಲಿ. ಇವರು ಹೇಳಿದ್ದನ್ನು ನಾವು ಕೇಳಿದ್ದೇವೆ, ನಾವು ಹೇಳುವುದನ್ನು ಇವರು ಕೇಳಲಿ. ನಾವು ಹೇಳುವುದನ್ನು ಮಾತ್ರ ಇವರು ಕೇಳಬಾರದೇ?

ಶ್ರೀ ಎಚ್. ಎನ್. ನಂಜೇಗೌಡ : ಮಾನ್ಯ ವಾಟಾಳ್ ಅವರಿಗೆ ತೊಂದರೆ ಕೊಡುವುದು ಬೇಡ, ಅವರಿಗೇನೋ ಕೆಲಸ ಇದೆ - ಅರ್ಜೆಂಟ್.

ಅಧ್ಯಕ್ಷರು : ಈಗ ಅವರು ಬಂದರೆ ನನಗೆ ಕಷ್ಟ ಆಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ನನ್ನ ಆತ್ಮೀಯರಾಗಿರಬಹುದು, ಅವರು ಸ್ನೇಹಿತರಾಗಿರಬಹುದು. ನಾನು ಒಂದು ವಿಚಾರ ಹೇಳುತ್ತೇನೆ. ಈ ತರಹ ಮಾತನಾಡುವುದರಿಂದ ಇದೇನೂ ಒಳ್ಳೆಯದಲ್ಲ. ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ಹೇಳುತ್ತಿದ್ದೇವೆ, ಅದಕ್ಕೆ ಒಂದು ಗಾಂಭೀರ್ಯತೆ ಬರಲಿ ಎಂದು ಹೇಳಿದರೆ ನನಗೇನಾದರೂ ಕೆಲಸ ಇದೆಯೇ? ಯಾವ ಕೆಲಸ? ಯಾವತ್ತಾದರೂ ಜನುಮದಲ್ಲಿ 11 ಗಂಟೆಗೆ ಬಂದರೆ ನಾನು 6 ಗಂಟೆಗೇ ಎದ್ದು ಹೋಗುವುದು. ಇವರ ತರಹ ನಾನು ವಾರಕ್ಕೆ ಒಂದು ಸಾರಿ ಬರುವುದಿಲ್ಲ. ವಾರಕ್ಕೆ ಒಮ್ಮೆ ಸಭೆಗೆ ಬರುವುದು, ಇಲ್ಲಿ ಹೇಳುವುದು.

(ಮಾನ್ಯ ವಾಟಾಳ್ ಸಭೆಯಿಂದ ಹೊರಗೆ ನಡೆದರು)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳಾದ ರೋಷನ್ ಬೇಗ್ ಅವರು ಬೆಂಗಳೂರಿನವರು. ಅವರಿಗೆ ಒಳಗೂ ಗೊತ್ತು, ಹೊರಗೂ ಗೊತ್ತು. ಗೊತ್ತಿಲ್ಲದೇ ಇರತಕ್ಕದ್ದು ಏನೂ ಇಲ್ಲ.

ಅಧ್ಯಕ್ಷರು : ಈಗ ಮಾನ್ಯ ತಿಮ್ಮಪ್ಪನವರೇ, ನಾವು ಮಾತನಾಡಿಕೊಳ್ಳೋಣ. ರೋಶನ್ ಬೇಗ್ ಅವರಿಗೆ he has got his own limitations. ಸರ್ಕಾರ ಯಾರದ್ದೇ ಇರಲಿ. ಮಾನ್ಯ ಮೊಯಲಿಯವರು ಮಾನ್ಯ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದಂತಹವರು, ಹೇಗೆ ಹೇಗೆ ಒತ್ತಡಗಳು ಬರುತ್ತವೆ? ಅವುಗಳಿಗೆ ಯೀಲ್ಡ್ ಆಗದೇ ಇದರೆ ಯಾವ ರೀತಿ ತೊಂದರೆ ಕೊಡುತ್ತಾರೆ ಎಂದು ಎಲ್ಲವನ್ನೂ ನೋಡಿರತಕ್ಕವರು. ನಾವು ಎಲ್ಲೋ ಒಂದು ಕಡೆಗೆ ನಿರ್ಲಜ್ಜಿತರಾಗಿ ಇವಕ್ಕೆಲ್ಲಾ ಪ್ರೋತ್ಸಾಹ ಕೊಡುತ್ತೇವೆ. ಅಂಥಹ ಅಧಿಕಾರಿಗಳಿಗೆಲ್ಲಾ ನಾವೇ ಸಮರ್ಥನೆ ಮಾಡುತ್ತೇವೆ. ನಮಗೆ ಜಾತಿಯೋ, ಕುಲವೋ ಅಥವಾ ಬಂಧುತ್ವವೋ ಏನೋ ಒಂದು ನಿರ್ಬಂಧ ಇರುತ್ತದೆ. ಶಾಸಕರು ಬಂದು

ಹೇಳಿದಾಗ ಮಂತ್ರಿಮಂಡಲ ನಡೆಸಿಕೊಂಡು ಹೋಗುವವರು ಕೇಳಲೇ ಬೇಕಾಗುತ್ತದೆ. ಕೊನೆಯದಾಗಿ ನಾವು ಹೇಳತಕ್ಕ ಮಾತಿನಲ್ಲಿ ಪೂರ್ಣ ನಂಬಿಕೆ ಇಟ್ಟು ಅದನ್ನು ಆಚರಣೆಗೆ ತರತಕ್ಕಂಥ ಮನೋಭಾವದವರು ಆದರೆ ಈ ಸಮಸ್ಯೆಗಳಿಲ್ಲಾ ಬರುವುದಿಲ್ಲ. ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಆದರೂ ಒಂದು ಸೋಲಿನಲ್ಲಿ ಕೂಡ ನಾವು ಗೆಲುವನ್ನು ನಿರೀಕ್ಷಣೆ ಮಾಡಬಹುದು. ಅದಕ್ಕೆ ನಾನು ಗೃಹ ಸಚಿವರಲ್ಲಿ ಕೇಳುವುದು ಏನೆಂದರೆ ಯಾರು ಬೇರು ಬಿಟ್ಟು ನಿಂತಂತಹ ಕೆಲವು ಅಧಿಕಾರಿಗಳು ಇರುತ್ತಾರೆ, ಅವರನ್ನು ಸ್ವಲ್ಪ ನಗರದಿಂದ ಹೊರ ವಲಯಕ್ಕೆ ಹಾಕಿ ಹೊಸ ಮುಖಗಳನ್ನು ಇಲ್ಲಿಗೆ ತನ್ನಿ. ಆಗ ಇಲ್ಲಿ ಸ್ವಲ್ಪ ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆ. ಏಕೆಂದರೆ ಬೆಂಗಳೂರು ಬೆಳೆಯತಕ್ಕ ನಗರ. ಬೆಂಗಳೂರು ಈವತ್ತಿಗೂ ಜಗತ್ತಿನಲ್ಲಿ ಗೌರವರನ್ನು ಪಡೆದಿರುವ ನಗರ ಮತ್ತು ಆಕರ್ಷಕವಾಗಿರುವ ನಗರವೂ ಆಗಿದೆ. ಇಡೀ ಭಾರತದಲ್ಲಿ ಬೆಂಗಳೂರಿಗೆ ಒಳ್ಳೆಯ ಹೆಸರು ಇದೆ. ಅದನ್ನು ಅಳಿಸಲು ನಾವು ಹೋಗಬಾರದು. ಗೃಹಸಚಿವರು ಇಲ್ಲಿ ಸ್ವಲ್ಪ ಸಕ್ರೀಯವಾದ ಪಾತ್ರವನ್ನು ನಿರ್ವಹಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು) : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಗಮನಹರಿಸುತ್ತೇನೆ.

ಕೋಲಾರ ಜಿಲ್ಲೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಕೆರೆಗಳ ಹೂಳೆತ್ತುವ ವಿಚಾರ ಬಹಳ ಮುಖ್ಯವಾದುದು. ಅದರಲ್ಲೂ ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತಹ ವಿಚಾರ ಇದಾಗಿದೆ. ಆಲಮಟ್ಟಿಯ ಬಗ್ಗೆ ಈಗತಾನೇ ಇಲ್ಲಿ ಚರ್ಚೆಯಾಯಿತು. ಮಾತು ಎತ್ತಿದರೆ ಮಾನ್ಯ ನಾಗೇಗೌಡರು ಆಲಮಟ್ಟಿಗಾಗಿ ಸಾವಿರಾರು ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ನಮ್ಮ ಭಾಗದಲ್ಲಿನ ಕೆರೆಗಳಲ್ಲಿ ಹೂಳೆತ್ತಲು ಐವತ್ತು ಕೋಟಿ ರೂ. ಖರ್ಚು ಮಾಡಲು ಸರ್ಕಾರದಿಂದ ಆಗುತ್ತಿಲ್ಲ. ಮೊನ್ನೆ ಕೋಲಾರದಲ್ಲಿ ನಡೆದ ಕೆ.ಡಿ.ಪಿ. ಸಭೆಯಲ್ಲಿ ಮಾನ್ಯ ಬೈರೇಗೌಡರು ಎಲ್ಲಾ ತಾಲ್ಲೂಕುಗಳಲ್ಲೂ ಎರಡು ಮೂರು ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ತೆಗೆದುಕೊಳ್ಳಿ, ಇದಕ್ಕಾಗಿ ಎಲ್ಲಾ ಶಾಸಕರು ರೈತರನ್ನು ಒಪ್ಪಿಸಬೇಕೆಂದು ಹೇಳಿಬಿಟ್ಟರು. ನಾವು ಹಳ್ಳಿಗಳಿಗೆ ಹೋಗಿ ರೈತರನ್ನು ಒಪ್ಪಿಸಿ ಅವರು ತಯಾರಾಗಿದ್ದಾರೆ, ಆದರೆ ಒಂದು ವಾರಾವಾದರೂ ಹೂಳೆತ್ತುವ ಎಕ್ಸಕವೇಟರ್ಸ್‌ಗಳು ಜೆ.ಸಿ.ಬಿ.ಗಳು ಬಂದಿಲ್ಲ. ಸರ್ಕಾರ ಹೂಳೆತ್ತುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಸಂಪೂರ್ಣವಾಗಿ ಇಂಗಿಹೋಗಿದೆ. ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೆರೆಗಳ ಹೂಳೆತ್ತುವುದು ಮೂಲಭೂತವಾದ ಕಾರ್ಯಕ್ರಮವಾಗಬೇಕಾಗಿದೆ. ಇವತ್ತಿಗೂ ಅಲ್ಲಿ ಎಕ್ಸ್‌ಕವೇಟರ್ಸ್‌ಗಳನ್ನು ತರಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಆ ರೀತಿ ಸಾಧ್ಯವಾಗದಿದ್ದ ಮೇಲೆ ಹೂಳೆತ್ತುವ ಕಾರ್ಯಕ್ರಮವನ್ನು ಏಕೆ ಮಾಡುತ್ತೇವೆಂದು ಊರಿಗೆಲ್ಲಾ ಡಂಗೂರ ಸಾರಿ ಹೇಳಬೇಕು. ಸರ್ಕಾರದವರು ಕಡಿಮೆ ಕೆಪ್ಯಾಸಿಟಿ ಜೆ.ಸಿ.ಬಿ.ಗೆ ಗಂಟೆಗೆ 470